https://www.freshersnow.com/

Test Paper : II

Test Subject : **KANNADA**

Test Subject Code : **K-0214**

Test Booklet Serial No. : ____________________

OMR Sheet No. : ____________________

Roll No. | | | | | | | | |

(Figures as per admission card)

**Name & Signature of Invigilator/s**

Signature: ____________________    Signature: ____________________

Name : ____________________    Name : ____________________

**Paper : II**

**Subject : KANNADA**

Time : 1 Hour 15 Minutes    Maximum Marks : 100

Number of Pages in this Booklet : **8**    Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.

   **ಉದಾಹರಣೆ:** (A) (B) ● (D)

   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, **ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಉತ್ತರ ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯ ಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**

**Instructions for the Candidates**

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.

   **Example** : (A) (B) ● (D)

   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the ovals in the Answer Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**



https://www.freshersnow.com/previous-year-question-papers/

https://www.freshersnow.com/



# ಕನ್ನಡ
## ಪತ್ರಿಕೆ – II

**ಸೂಚನೆಗಳು** : ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳಿಗೂ **ಕಡ್ಡಾಯವಾಗಿ** ಉತ್ತರಿಸಬೇಕು.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

**1.** ಬಾದಾಮಿ ಶಾಸನವನ್ನು ಸಂಪಾದಿಸಿ ಪ್ರಕಟಿಸಿದವರು
(A) ಬಿ. ಎಲ್. ರೈಸ್ (B) ಜೆ. ಎಫ್. ಫ್ಲೀಟ್
(C) ಜಿ. ಎಸ್. ಗಾಯಿ (D) ಎಫ್. ಕಿಟೆಲ್

**2.** ''ವಿಷಯ ಪ್ರಣಯಂ ಸಮವೃತ್ತಿಯಪ್ಪವೋಲ್ ಮೃಗಗಣದೊಳ್'' – ಈ ಉಕ್ತಿಯು ಬಂದಿರುವ ಕೃತಿ
(A) ಯಶೋಧರ ಚರಿತೆ (B) ಕರ್ಣಾಟಕ ಕಾದಂಬರಿ
(C) ಕವಿರಾಜಮಾರ್ಗ (D) ಕಾವ್ಯಾವಲೋಕನ

**3.** 'ನಭಾ' ಮತ್ತು 'ವಿರಾಗಿಣ' – ಕೃತಿಯ ಕರ್ತೃ
(A) ತಿರುಮಲಾಂಬ (B) ಕೊಡಗಿನ ಗೌರಮ್ಮ
(C) ತ್ರಿವೇಣಿ (D) ತಿರುಮಲೆ ರಾಜಮ್ಮ

**4.** ರಾಚಮಲ್ಲನ ಆಶ್ರಯದಲ್ಲಿದ್ದ ಚಾವುಂಡರಾಯನ ಕಾಲ
(A) ಕ್ರಿ. ಶ. 931 (B) ಕ್ರಿ. ಶ. 975
(C) ಕ್ರಿ. ಶ. 990 (D) ಕ್ರಿ. ಶ. 1024

**5.** ''ಕಲಿದೇವರ ದೇವ'' – ಇದು ಯಾರ ಅಂಕಿತ ?
(A) ಮಾದಾರ ಚೆನ್ನಯ್ಯ (B) ಹಡಪದ ಅಪ್ಪಣ್ಣ
(C) ಮೋಳಿಗೆ ಮಾರಯ್ಯ (D) ಮಡಿವಾಳ ಮಾಚಿದೇವ

**6.** ''ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು'' – ಈ ಉಕ್ತಿಯು ಯಾರದು ?
(A) ಮಾದಾರ ಧೂಳಯ್ಯ (B) ಬಸವಣ್ಣ
(C) ಅಂಬಿಗರ ಚೌಡಯ್ಯ (D) ಅಕ್ಕಮಹಾದೇವಿ

**7.** ''ನಿರ್ಮಳರ ಸಂಗವು ಕಳೆಯದಿಹುದೇ ಮನದ ಮೈಲಿಗೆಯ'' – ಈ ಸಾಲುಗಳಿರುವ ಕೃತಿ
(A) ಪ್ರಭುಲಿಂಗ ಲೀಲೆ (B) ಹರಿಶ್ಚಂದ್ರ ಕಾವ್ಯ
(C) ಗಿರಿಜಾ ಕಲ್ಯಾಣ (D) ಪ್ರಭುದೇವರ ರಗಳೆ

**8.** ರುದ್ರಭಟ್ಟನ ಆಶ್ರಯದಾತ
(A) ವೀರಬಲ್ಲಾಳ (B) ನರಸಿಂಹ ಬಲ್ಲಾಳ
(C) ವಿಷ್ಣುವರ್ಧನ (D) ಕೃಷ್ಣದೇವರಾಯ

**9.** ''ಅರಿತು ನಡೆಯಲಿಬೇಕು ನರಕಾಯವೆತ್ತಿದ ಮೇಲೆ'' – ಈ ಉಕ್ತಿಯು ಇವರದು.
(A) ಪುರಂದರದಾಸ (B) ಜಗನ್ನಾಥದಾಸ
(C) ಕನಕದಾಸ (D) ನರಹರಿತೀರ್ಥರು

**10.** 'ರಾಮಚಂದ್ರ ಚರಿತ' ಪುರಾಣದ ಮೂಲ ಆಕರ
(A) ಪಉಮಚರಿಯ
(B) ಸಮರ ಇಚ್ಚಾಕಹಾ
(C) ಭಗವತೀ ಆರಾಧನಾ
(D) ತಿಸಟ್ಟಿ ಮಹಾಪುರುಷ ಚರಿಊ

**11.** 'ಭೇದ' ಕಾದಂಬರಿಯ ಕರ್ತೃ
(A) ಶಾಂತಿನಾಥ ದೇಸಾಯಿ (B) ಯಶವಂತ ಚಿತ್ತಾಲ
(C) ವ್ಯಾಸರಾಯ ಬಲ್ಲಾಳ (D) ಗಂಗಾಧರ ಚಿತ್ತಾಲ

**12.** ಕನ್ನಡದ ಮೊದಲ ಜಾನಪದ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿದವರು
(A) ಜಿ. ಶಂ. ಪರಮಶಿವಯ್ಯ (B) ಬಿ. ಎಸ್. ಗದ್ದಗಿಮಠ
(C) ಬಿ. ಬಿ. ಹೆಂಡಿ (D) ನಂ. ತಪಸ್ವಿಕುಮಾರ್

**13.** 'ಸಾತ್ವಿಕ ಪಥ' ಯಾವ ಪ್ರಕಾರದ್ದು ?
(A) ಕಾದಂಬರಿ (B) ವಿಮರ್ಶೆ
(C) ಪ್ರಬಂಧ (D) ಕಾವ್ಯ

**14.** ''ಪ್ರಜ್ಞಾನವನವೋನ್ಮೇಷಶಾಲಿನೀ ಪ್ರತಿಭಾಮತ'' – ಎಂದು ಹೇಳಿದವರು
(A) ಭಟ್ಟತೌತ (B) ಭಟ್ಟನಾಯಕ
(C) ಭಟ್ಟ ಲೊಲ್ಲಟ (D) ಕುಂತಕ

**15.** ಐ. ಎ. ರಿಚರ್ಡ್ಸ್‌ನ ಕೃತಿ
(A) ದಿ ಡಿಫೆನ್ಸ್ ಆಫ್ ಪೊಯೆಸಿ
(B) ವೇಸ್ಟ್ ಲ್ಯಾಂಡ್
(C) ಪೊಯೆಟಿಕ್ಸ್
(D) ಪ್ರಾಕ್ಟಿಕಲ್ ಕ್ರಿಟಿಸಿಜಂ



https://www.freshersnow.com/previous-year-question-papers/

https://www.freshersnow.com/



**16.** ಜಯಕೀರ್ತಿಯು ಯಾವುದನ್ನು ಮಹಾಕ್ಷರ ಎಂದು ಕರೆದಿದ್ದಾನೆ ?
(A) ಪಿರಿಯಕ್ಕರ (B) ಚೌಪದಿ
(C) ಅಕ್ಕರ (D) ಮದನವತಿ

**17.** 'ಶಿವದಾಸ ಗೀತಾಂಜಲಿ'ಯನ್ನು ಸಂಪಾದಿಸಿದವರು
(A) ಫ. ಗು. ಹಳಕಟ್ಟಿ (B) ಸಿ. ಸಿ. ಬಸವನಾಳ
(C) ಎಲ್. ಬಸವರಾಜು (D) ಎಂ. ಎಂ. ಕಲಬುರ್ಗಿ

**18.** 'ಜಾತಕ ತಿಲಕ'ದ ಕರ್ತೃ
(A) ಶ್ರೀಧರಾಚಾರ್ಯ (B) ಶಾಂತಿನಾಥ
(C) ಚಂದ್ರರಾಜ (D) ಕರ್ಣಪಾರ್ಯ

**19.** ಹದಿನಾಲ್ಕು ಮಹಾಪುರುಷರ ಕಥೆಗಳನ್ನು 14 ಆಶ್ವಾಸಗಳಲ್ಲಿ ನಿರೂಪಿಸಿದ ಗ್ರಂಥ
(A) ಆದಿಪುರಾಣ (B) ಶಾಂತಿಪುರಾಣ
(C) ಧರ್ಮಾಮೃತ (D) ಸಮಯ ಪರೀಕ್ಷೆ

**20.** ಚ್, ಜ್, ಞ್ – ಇವುಗಳನ್ನು ಹೀಗೆನ್ನುತ್ತಾರೆ ?
(A) ತಾಲವ್ಯ (B) ವರ್ತ್ಸ್ಯ
(C) ದಂತೋಷ್ಠ್ಯ (D) ಮೂರ್ಧನ್ಯ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

**21.** ಇವರು ಚಂಪೂಕಾವ್ಯಗಳನ್ನು ಬರೆದವರು.
(I) ಶಾಂತಿನಾಥ ಮತ್ತು ಕರ್ಣಪಾರ್ಯ
(II) ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ರಾಘವಾಂಕ
(III) ಮಹಾಬಲ ಕವಿ ಮತ್ತು ಹರಿಹರ
(IV) ಕುಮುದೇಂದು ಮತ್ತು ಹಸ್ತಿಮಲ್ಲ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು II (B) I ಮತ್ತು III
(C) II ಮತ್ತು IV (D) III ಮತ್ತು IV

**22.** ಇವು ರೂಪಕಾಲಂಕಾರಕ್ಕೆ ಉದಾಹರಣೆಗಳು
(I) ಯಮಕ (II) ದೀಪಕ
(III) ಉತ್ಪ್ರೇಕ್ಷೆ (IV) ಉಪಮೆ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV (B) II ಮತ್ತು III
(C) I ಮತ್ತು II (D) II ಮತ್ತು IV

**23.** ಇವು ಶ್ರೀರಂಗರ ನಾಟಕಗಳು.
(I) ಧರ್ಮವಿಜಯ ಮತ್ತು ಹರಿಜನ್ವಾರ
(II) ಕತ್ತಲೆ ಬೆಳಕು ಮತ್ತು ಬಹಿಷ್ಕಾರ
(III) ಕೇಳು ಜನಮೇಜಯ ಮತ್ತು ಜೈಸಿದನಾಯ್ಕ
(IV) ಶೋಕಚಕ್ರ ಮತ್ತು ಜೀವನ ಜೋಕಾಲಿ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು II (B) I ಮತ್ತು III
(C) I ಮತ್ತು IV (D) II ಮತ್ತು IV

**24.** ಇವು ಸಂಶೋಧನಾ ಕೃತಿಗಳು
(I) ಸಾತತ್ಯ ಮತ್ತು ವಿಶ್ಲೇಷಣೆ
(II) ಗ್ರಾಮೀಣ ಮತ್ತು ಶಕ್ತಿಶಾರದೆಯ ಮೇಳ
(III) ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಮತ್ತು ನಾಡೋಜ ಪಂಪ
(IV) ನಿಜದ ನೆಲೆ ಮತ್ತು ಸಂಕಥನ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV (B) II ಮತ್ತು III
(C) I ಮತ್ತು II (D) II ಮತ್ತು IV

**25.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ಅಲ್ಲ ?
(I) ಕೆರೆಯ ಪದ್ಮರಸ – ದೀಕ್ಷಾಬೋಧೆ
(II) ಕವಿಕಾಮ – ವರ್ಧಮಾನ ಪುರಾಣ
(III) ಕಮಲಭವ – ಶಾಂತೀಶ್ವರ ಪುರಾಣ
(IV) ಅಗ್ಗಳ – ಅನಂತನಾಥ ಪುರಾಣ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV (B) II ಮತ್ತು III
(C) I ಮತ್ತು II (D) II ಮತ್ತು IV

**26.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ?
(I) ಚಾವುಂಡರಾಯ – ರಕ್ಕಸಗಂಗ
(II) ರನ್ನ – 3ನೇಯ ಕೃಷ್ಣ
(III) ನಾಗಚಂದ್ರ – ಹೊಯ್ಸಳ 2ನೇಯ ಬಲ್ಲಾಳ
(IV) ನಾಗವರ್ಮ-2 – ಚಾಲುಕ್ಯ ಜಗದೇಕಮಲ್ಲ
ಇವುಗಳಲ್ಲಿ ಸರಿಯಾದ ಉತ್ತರ :
(A) I ಮತ್ತು IV (B) II ಮತ್ತು IV
(C) I ಮತ್ತು III (D) III ಮತ್ತು IV



https://www.freshersnow.com/previous-year-question-papers/

https://www.freshersnow.com/



**27.** ಇವುಗಳಲ್ಲಿ ಯಾವುದು ತಪ್ಪು ಹೊಂದಾಣಿಕೆ ?

(I) ನಿರಂಜನ – ಚಿರಸ್ಮರಣೆ

(II) ಎಸ್. ಎಲ್. ಭೈರಪ್ಪ – ವಿಮೋಚನೆ

(III) ಚದುರಂಗ – ಬಿರುಕು

(IV) ಶಾಂತಿನಾಥ ದೇಸಾಯಿ – ವಿಕ್ಷೇಪ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು IV (B) II ಮತ್ತು IV

(C) II ಮತ್ತು III (D) III ಮತ್ತು IV

**28.** ಇವು ತೃತೀಯ ವಿಭಕ್ತಿಯ ಪ್ರತ್ಯಯಗಳು.

(I) ಇಂ, ಇಂದಂ (II) ಎಳ್, ಓಳ್

(III) ಅನ್, ಎ (IV) ಇಂದೆ, ಇನ್

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II (B) I ಮತ್ತು IV

(C) I ಮತ್ತು III (D) III ಮತ್ತು IV

**29.** ಇವು ದೇಶೀ ಪದಗಳು.

(I) ಕಬ್ಬ ಮತ್ತು ಕಜ್ಜ

(II) ಕಾಗದ ಮತ್ತು ಖೈದಿ

(III) ಓಜ ಮತ್ತು ಅಬ್ಬೆ

(IV) ಕಿರಾಣಿ ಮತ್ತು ಕಿಲ್ಲೇದಾರ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II (B) I ಮತ್ತು IV

(C) I ಮತ್ತು III (D) III ಮತ್ತು IV

**30.** ಇವು ತತ್ಪುರುಷ ಸಮಾಸಕ್ಕೆ ಉದಾಹರಣೆ.

(I) ಮುಕ್ಕಣ್ಣ (II) ಮಾಮರ

(III) ಅಂಗೈ (IV) ಮಾಂಗಾಯಿ

ಇವುಗಳಲ್ಲಿ ಸರಿಯಾದ ಉತ್ತರ :

(A) II ಮತ್ತು IV (B) I ಮತ್ತು IV

(C) I ಮತ್ತು III (D) III ಮತ್ತು IV

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

ಈ ಕೆಳಗಿನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ. (**31**ನೇ ಪ್ರಶ್ನೆಯಿಂದ **35** ನೇ ಪ್ರಶ್ನೆಯವರೆಗೆ)

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಸಂಬಿಯೆಂಬುದು ಪೊಳಲದನಾಳ್ವೊನತಿಬಳನೆಂ 'ಬರಸನಾ' ತನ ಮಹಾದೇವಿ ಮನೋಹರಿಯೆಂಬೊಳ್ ಪೆಸರ್ಗೆ ತಕ್ಕಂತೆ ನೋಡಿದರೆಲ್ಲರ್ಗ್ಗಳ ಕಣ್ಣಾಲಿಗೆ ಸೊಗಯಿಸುವಳ್ ಸತ್ಯ ಶೌಚಾಚಾರಂಗಳಿಂ ಕೂಡಿದೊಳ್ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯಳಂತವರ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರೆ ಮತ್ತಾ ಅರಸನ ಮಂತ್ರಿ ಸೋಮಶರ್ಮನೆಂಬೊ ನಾತನ ಭಾರ್ಯೆ ಕಾಶ್ಯಪಿಯೆಂಬೊಳ್ ಇರ್ವರ್ಗ್ಗಂ ಮಕ್ಕಳಗ್ನಿಭೂತಿ ವಾಯುಭೂತಿ ಯೆಂಬವರ್ಗಳ್ ತಾಯ್‌ತಂದೆವಿರ ಕೇಳ್ದಿಯಂಗೆಯ್ಯದಾ ವೇದಂ ಮೊದಲಾಗೊಡೆಯ ಶಾಸ್ತ್ರಂಗಳನೋದದೆ ತಂದೆಪಡೆದ ಕಸವರಮಂ ಬಿಯಂಗೆಯ್ಯುತ್ತುಂ ಸಪ್ತವ್ಯಸನಾಭಿಭೂತರಾಗಿ ನೆಗಳುತ್ತಿರೆಯಿರೆ ಪಲಕಾಲದಿಂ ತಂದೆ ಕರೆದೊಡೆ ಸೋಮಶರ್ಮ್ಮಂಗೆ ಮಕ್ಕಳೊಳರಿಲ್ಲೆಂದರಸಂ ಬೆಸಗೊಂಡೊಡೊಳರೆಂದು ಪೇಳ್ದೊಡವರ್ಗ್ಗೆ ಬಳಿಯಟ್ಟಿ ವರಿಸಿಮಜ್ಜನದೊಳ್ ಮಿಸಿಸಿ ಉಡಿಸಿ ತುಡಿಸಿ ಯೂಡಿ ತಂಬುಲಂಗೊಟ್ಟುಬ್ಬೆಗಂಬಡದಿರಿಮೆಂದು ನುಡಿದವರ್ಗ್ಗಳ ದುಃಖಮನಾರಿಸಿ ಬೀಡಿಂಗೆ ಪೋಗಲ್ವೇಳ್ದು ಕೆಲವು ದಿವಸದಿಂ ಬಳಿಯಟ್ಟಿ ವರಿಸಿ ನೀವಾ ವೋದುಗಳಂ ಬಲ್ಲಿರೆಂದಿರ್ವರುಮಂ ಬೆಸಗೊಂಡೊಡವರ್ಗ್ಗಳ್ ತಲೆಯ ಬಾಗಿ ಮರುಮಾತುಗೆಡದೆ ಕಣ್ಣ ನೀರಂತೀವಿ ನೆಲನಂ ಬರೆಯುತ್ತಿರೆ ಸಭೆಯೊಳಿರ್ದ್ದವರ್ಗ್ಗಳೆಲ್ಲಂ – ಇವರ್ ಮೂರ್ಖರೇನುಮೋದುಗಳನರಿಯರ್ ಸಪ್ತವ್ಯಸನಾಭಿಭೂತರೆಂದರಸಂಗೆ ಪೇಳ್ದೊಡರಸನ ವರ್ಗಳನಟ್ಟಿ ಕಳೆದವರ ದಾಯಿಗಂ ಶಾಸ್ತ್ರಂಗಳಂ ಬಲ್ಲೊಂಗಂ ಮಂತ್ರಿ ಪದವಿಯಂ ಬಾಳುಮಂ ಪ್ರತಿಪತ್ತಿಯುಮಂ ಕೊಟ್ಟುದಂ ಕೇಳ್ದಿರ್ವರುಮುಬ್ಬೆಗಂಬಟ್ಟು ವೈರಾಗ್ಯಪರಾಯಣರಾಗಿ ಕಪ್ಪಡಮುಟ್ಟು ಬೈಕಂದಿರಿದಿನ್ನಪ್ಪೊಡಮೋದುವಮೆಂದು ತಾಯ್ಗೆ ನುಡಿದೊಡಂ ತಪ್ಪೊಡೆ ಮಕ್ಕಳಿರಾ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬುದು ಪೊಳಲದನಾಳ್ವೊಂ ಸುಬಲನೆಂಬರಸನಾತನ ಮಹಾದೇವಿ ಸುಪ್ರಭೆಯೆಂಬೊಳವರ್ಗ್ಗೆ ಮಂತ್ರಿಯೆಮ್ಮಣ್ಣಂ ಸೂರ್ಯಮಿತ್ರನೆಂಬೊಂ ಎಲ್ಲಾ ಓದುಗಳುಮಂ ಬಲ್ಲೊನಾತಂ ನಿಮ್ಮನೋದಿಸಿ ಯೋಗ್ಯರಂ ಮಾಡುವಂತಿರೆ ನಿರೂಪಿಸಿ ಕಲ್ಪಿಸಿಯೋಲೆಯಂ ಬರೆಯಿಸಿ ನಿಮ್ಮ ಕಯ್ಯೊಳಟ್ಟಿಪಪೆಂ ನೀಮುಂ ಪೋಗಿ ನಿಮ್ಮ ಮಾವನ ಪಕ್ಕದೊಳೋದಿಮೆಂದೋಲೆಯಂ ಬರೆಯಿಸಿ



https://www.freshersnow.com/previous-year-question-papers/

https://www.freshersnow.com/



ಕೊಟ್ಟೊಡವರ್ಗ್ಗಳುಂ ತಾಯಂ ಬೀಳ್ಕೊಂಡು ಕತಿಪಯ ದಿವಸಂಗಳಿಂ ರಾಜಗೃಹಮನೆಯ್ದಿ ಸೂರ್ಯಮಿತ್ರನ ಮನೆಯಂ ಬೆಸಗೊಂಡು ಪೋಗಿ ಕಂಡೋಲೆಯನಿಕ್ಕಿದೊಡೆ ಸೂರ್ಯಮಿತ್ರನೆಲ್ಲಿಂ ಬಂದಿರಾರೋಲೆಯೆಂದು ಬೆಸಗೊಂಡೊಡೆ–ಕೌಸಂಬಿಯಿಂ ಬಂದೆವು ನಿಮ್ಮ ತಂಗೆಯಪ್ಪ ಕಾಶ್ಯಪಿಯಟ್ಟಿದೋಲೆಯೆಂದೊಡೋಲೆಯಂ ಬಾಜಿಸಿ ನೋಡಿ ಸೋಮಶರ್ಮಂ ಕಳಿದುದಮಂ ಮಂತ್ರಿಪದವಿ ಪೆರರ್ಗ್ಗಾದುದುಮಂ ಮಕ್ಕಳ್ ಸಪ್ತವ್ಯಸನಾಭಿಭೂತರಾಗಿ ಬಾಳಿಂ ಕೆಟ್ಟುದುಮಂ ಶಾಸ್ತ್ರಜ್ಞರುಂ ಬುದ್ಧಿಯೊಡೆಯರುಂ ಯೋಗ್ಯರುಮಪ್ಪಂತು ಮಾಡಿಮೆಂದು ಮಕ್ಕಳಂ ತನಗಿನಿತೊಪ್ಪಿಸಿಯಟ್ಟಿದುದುಮ ನಿಂತಿವೆಲ್ಲಮಂ ಬಾಜಿಸಿ ನೋಡಿ ಇವಂದಿರ್ಗ್ಗೆ ಪಸರಂಗೊಟ್ಟೆನಪ್ಪೊಡೆ ಮುನ್ನಿನಂತುರ್ಕಿ ಕಿಡುವರೆಂದು ಮನದೆ ಬಗೆದಗ್ನಿಭೂತಿ ವಾಯುಭೂತಿಗಳ್ಗಿಂತೆಂದಂ – ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮ್ಮನೆಂಬೊಂಮಯ್ದುನನುಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆನೆಂದವರ್ಗ್ಗೆ ನುಡಿದುಂ ಮತ್ತಮಿಂತೆಂದಂ ನೀಮಾರ್ಗ್ಗಾರಾದೊಡಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಳ್ತಿಯೊಳ್ ಬಂದಿರಪ್ಪೊಡೆ ಬೈಕಂದಿರಿದು ಕಪ್ಪಡಮುಟ್ಟಿರುಳುಂ ಪಗಲುಮಲಸದೆ ನಿರ್ಬಂಧದಿಂದೋದಲಾರ್ಪೊಡೆ ನಿಮ್ಮನೋದಿ ಸಲಕ್ಕುಮೆಂದೊಡವರ್ಗ್ಗಳುಮಿಂ ದಯೆಗೆಯ್ಯಿಂ ಮಹಾಪ್ರಸಾದಮೆಂದು ಪೊಡೆಮಟ್ಟು ಹರ್ಷಚಿತ್ತರಾಗಿ ಒಳ್ಳಿತಪ್ಪ ದಿವಸ ವಾರ ವಿದ್ಯಾ ನಕ್ಷತ್ರದಂದು ತಮ್ಮನುಕೂಲದೊಳೋಜರ್ಗ್ಗೆ ಪೊಡೆವಟ್ಟು ವಿದ್ಯಾಪ್ರಾರಂಭಂಗೆಯ್ದರ್ ಸೂರ್ಯಮಿತ್ರನುಮವರನಿರುಳುಂ ಪಗಲುಂ ನಿರಂತರಂ ನಿರ್ಬಂಧದಿಂದೋದಿಸಿ ಏಳೆಂಟು ವರುಷದಿಂದೊಳಗೆ ನಾಲ್ಕುವೇದಮುಮಾರಂಗಮುಂ ಪದಿನೆಂಟು ಧರ್ಮ ಶಾಸ್ತ್ರಂಗಳುಂ ಮೀಮಾಂಸಾ ನ್ಯಾಯವಿಸ್ತರಂ ವ್ಯಾಕರಣಂ ಪ್ರಮಾಣಂ ಛಂದಮಲಂಕಾರಂ ನಿಘಂಟು ಕಾವ್ಯ ನಾಟಕಂಗಳುಂ ಚಾಣಕ್ಯಂ ಸಾಮುದ್ರಿಕಂ ಶಾಲಿಹೊತಂತ್ರಂ ಪಾಳಕಾಪ್ಯಂ ಹಾನಿತಂ ಚರಕಮಶ್ವಿನೀಮತಂ ಬಾಹಲಂ ಸುಸ್ರುತಂ ಕ್ಷಾರಪಾನೀಯಂ ಮೊದಲಾಗೊಡೆಯ ನರವೈದ್ಯಂಗಳುಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲಮಂ ನೆರೆಯೆ ಕಲ್ಪಿಸಿ ಯೋಗ್ಯರ್ ಮಾಡಿದೊಡವರ್ ನಿಮ್ಮ ಪ್ರಸಾದದಿಂದೆಲ್ಲಾ ಶಾಸ್ತ್ರಮಂ ಕಲ್ತು ಪಂಡಿತರೆಮಾದೆಮೆಂದಾದಮಾನುಮೊಸೆದು ಮಿನ್ನೆಮ್ಮ ನಾಡ್ಗೆ ಪೋದಪೆಮೆಂದೋಜರ್ಗ್ಗೆರಗಿ ಪೊಡೆವಟ್ಟು ಬೀಳ್ಕೊಂಡಾಗಳೋಜರೆಂದರ್ – ನೀಮೆಮ್ಮ ತಂಗೆಯ ಮಕ್ಕಳಿರ್ ಸೋದರಳಿಯಂದಿರಪ್ಪಿರ್ ನಿಮಗಾಂ ಪಸರಂಗೊಟ್ಟೆನಿಲ್ಲೇಕೆಂದೊಡೆ ಮುನ್ನಿನಂತೆ ತಂದೆಯಲ್ಲಿಯುರ್ಕ್ಕಿ ಕೆಟ್ಟಂತಿರಿಲ್ಲಿಯುಮೆತ್ತಾನುಮುರ್ಕ್ಕಿ ಕಿಡುವಿರೆಂದಾಂ ನಿಮ್ಮಂ ಯೋಗ್ಯರಂ ಮಾಡುವ ಕಾರಣಮಾಗಿ ನಿಮಗೆ ಪಸರಂಗೊಟ್ಟೆನಿಲ್ಲಿದರ್ಕೆ ಮುಳಿಯದಿರಿಂ ಕ್ಷಮಿಯಿಸಿಮೆಂದುಡಲುಂ ತುಡಲುಂ ಸಂಬಳಮುಮಂ ಕೊಟ್ಟು ಕಳಿಪಿದಾಗಳ್ ಪಿರಿಯಾತನಗ್ನಿಭೂತಿಯೆಂಬೊಂ ಮಾವನೆಮಗೆ ಪಸರಂಗುಡದಿರ್ದರುಮಂ ಯೋಗ್ಯರಂ ಮಾಡಿದರೆಂದುಪಕಾರಮಂ ಮನದೆ ಬಗೆದಾದಮಾನುಂ ಸಂತೋಷಂ ಬಟ್ಟಂ ಕಿರಿಯಾತಂ ವಾಯುಭೂತಿ ಸೂರ್ಯಮಿತ್ರಂಗೆಯ್ದುದೆಲ್ಲಮಪಕಾರಮೆಂದು ಬಗೆದೆಂದಪ್ಪೊಡಮೆಮ್ಮ ಮಾವಂ ಬೈಕಂದಿರಿದು ತಂದ ಕೂಳ್ಗೆ ನೆರಮೆಣ್ಣೆಯನಕ್ಕುಪ್ಪನಕ್ಕೆ ಕಳಿಯನಕ್ಕೆಂದಪ್ಪೊಡಮಿಕ್ಕಿಯು ಮೆರೆಯಿಸಿಯುಮಯಂ ಕೆರೆಗೆ ವೋಗಿ ಮಿವಾಗಳ್ ತಲೆಯಂ ಪೂಸಲೆಣ್ಣೆಯನಪ್ಪೊಡಮೆರೆಯಿಸಿಯಯಂ ತಾಂ ದಿವ್ಯಮಪ್ಪಾಹಾರಂಗಳಂ ದೆವಸದೆವಸಕ್ಕಂ ಪಲಂಬರ್ ನಂಟರ್ಕ್ಕಳುಂ ಆಳ್ಗಳುಂ ಬೆರಸುಣ್ಗುಂ ಪರ್ವದಿವಸದೊಳಪ್ಪೊಡಮೆಂದಾನುಮಿವರ್ಗ್ಗುಣಲಿಕ್ಕಿ ಮೆಂದಳರೆಯಂ ಪಂಚಮಹಾಪಾತಕನೆಮ್ಮನೇರೆಂಟ್ಟು ವರುಷಂಬರಂ ಪಗೆವಂರಂಬಗೆವಂತೆ ದಂಡಿಸಿದನೆಂದು ಮನದೊಳ್ ಮುಳಿಸಂ ಭಾವಿಸಿ ಪೊರಮಟ್ಟು ಪೋದನ್.

**31.** ಸೋಮಶರ್ಮನ ಮಡದಿ

(A) ಮನೋಹರಿ (B) ಕಾಶ್ಯಪಿ

(C) ಸುಪ್ರಭೆ (D) ವೀರಶೀ

**32.** ಸೂರ್ಯಮಿತ್ರನು ಕಾಶ್ಯಪಿಗೆ ಏನಾಗಬೇಕು ?

(A) ತಂದೆ (B) ಗಂಡ

(C) ಮಾವ (D) ಅಣ್ಣ

**33.** ಅಗ್ನಿಭೂತಿ – ವಾಯುಭೂತಿಯರನ್ನು ತಾಯಿ ಕಳುಹಿಸಿಕೊಟ್ಟಿರುವುದು.

(A) ಕೌಸಂಬಿಗೆ (B) ವತ್ಸನಾಡಿಗೆ

(C) ರಾಜಗೃಹಕ್ಕೆ (D) ಮಗಧೆಗೆ



https://www.freshersnow.com/previous-year-question-papers/

https://www.freshersnow.com/



**34.** ಸೂರ್ಯಮಿತ್ರರು ಅಗ್ನಿಭೂತಿ – ವಾಯುಭೂತಿಯರಿಗೆ ಪಸರಗುಡದಿರಲು ಕಾರಣ
(A) ಸಂಬಂಧಿಕರೆಂದು
(B) ವಿದ್ಯಾವಂತರಾಗುತ್ತಾರೆಂದು
(C) ಸೋಮಾರಿಗಳಾಗುತ್ತಾರೆಂದು
(D) ಸೊಕ್ಕಿ ಕೆಡುತ್ತಾರೆಂದು

**35.** ವಾಯುಭೂತಿ ಪಂಡಿತನಾಗಿ ಹೋಗುವಾಗ ಸೂರ್ಯಮಿತ್ರನ ಬಗ್ಗೆ
(A) ಉಪಕಾರವನ್ನು ನೆನೆದನು
(B) ಸಂಭ್ರಮಗೊಂಡನು
(C) ಸಂತೋಷಗೊಂಡನು
(D) ಸಿಟ್ಟುಗೊಂಡನು

**ಹೇಳಿಕೆ– ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

**36.** **ಹೇಳಿಕೆ**: ''ಬೆಸಮಾರ್ ಕೊಂಡವೊಲಕ್ಕುಂ''.
**ವಿವರಣೆ**: ಕಾರ್ಯವನ್ನು ಯಾರು ಕೈಗೆತ್ತಿಕೊಳ್ಳುವರೋ ಅದರಂತೆ ಆಗುವುದು.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**37.** **ಹೇಳಿಕೆ** : ''ಹಿಂದಣ ಅನಂತವನು ಮುಂದಣ ಅನಂತವನು ಒಂದು ದಿನ ಒಳಕೊಂಡಿತ್ತು ನೋಡಾ''.
**ವಿವರಣೆ** : ಹಿಂದಿದ್ದ ಅನಂತನನ್ನು ಮುಂದೆ ಬರುವ ಅನಂತನ್ನು ಒಂದೇ ದಿನ ನೋಡಲಾಗಿತ್ತು.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**38.** **ಹೇಳಿಕೆ**: ''ಬೆಳೆವ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು, ಎಚ್ಚರಲೀಯದು''.
**ವಿವರಣೆ**: ಬೆಲೆಯಲಿರುವ ಭೂಮಿಯಲ್ಲಿ ಕಸ ಬೆಳೆದು ಬೀಳು ಬಿದ್ದಿದೆ.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**39.** **ಹೇಳಿಕೆ**: ''ಮಾನವ ಕುಲಂ ತಾನೊಂದೆ ಕುಲಂ''.
**ವಿವರಣೆ**: ಮಾನವ ಕುಲವೊಂದೇ ಕುಲ, ಮತ್ತಾವುದೂ ಅಲ್ಲ.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**40.** **ಹೇಳಿಕೆ**: ''ಕಾಯ್ದ ಬೆನ್ನೀರ್ ಮನೆ ಸುಡುದು''.
**ವಿವರಣೆ**: ಕಾದ ಬಿಸಿ ನೀರು ಮನೆ ಸುಡಲಾರದು.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**41.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?
(A) ಧರ್ಮಪರೀಕ್ಷೆ – ಷಟ್ಪದಿ
(B) ವೀರೇಶ ಚರಿತೆ – ವಾರ್ಧಕ ಷಟ್ಪದಿ
(C) ಸನತ್ಕುಮಾರ ಚರಿತೆ – ಸಾಂಗತ್ಯ
(D) ಮಹಲಿಂಗಶತಕ – ತ್ರಿಪದಿ

**42.** ಕೆಳಗಿನವುಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?
(A) ಕೆರೆಯ ಪದ್ಮರಸ – ಹರಿವಂಶಾಭ್ಯುದಯ
(B) 2ನೇಯ ಗುಣವರ್ಮ – ಪುಷ್ಪದಂತ ಪುರಾಣ
(C) ಅಗ್ಗಳ – ದೀಕ್ಷಾಬೋಧೆ
(D) ಬಂಧುವರ್ಮ – ಚಂದ್ರಪ್ರಭ ಪುರಾಣ

**43.** ಕೆಳಗಿನವುಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?
(A) ಕೆರೆಯ ಪದ್ಮರಸ – ಜೈನ
(B) ಷಡಕ್ಷರದೇವ – ವೀರಶೈವ
(C) ಲಕ್ಷ್ಮೀಶ – ಬ್ರಾಹ್ಮಣ
(D) ಚಿಕ್ಕದೇವರಾಜ – ವೈಷ್ಣವ



https://www.freshersnow.com/previous-year-question-papers/

https://www.freshersnow.com/



**44.** ಕೆಳಗಿನವುಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?

(A) ಬಸವಣ್ಣ – ಕೂಡಲ ಸಂಗಮದೇವ

(B) ಅಕ್ಕನಾಗಮ್ಮ – ಬಸವಣ್ಣ ಪ್ರಿಯ ಚೆನ್ನಸಂಗ

(C) ಆಯ್ದಕ್ಕಿ ಮಾರಯ – ಸಿದ್ಧಸೋಮನಾಥ ಲಿಂಗ

(D) ಅಲ್ಲಮಪ್ರಭು – ಗುಹೇಶ್ವರ

**45.** ಕೆಳಗಿನವುಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?

(A) ಕುವೆಂಪು – ಶ್ರೀರಾಮಾಯಣ ದರ್ಶನಂ

(B) ವಿ. ಕೃ. ಗೋಕಾಕ – ಭಾರತ ಸಿಂಧೂರಶ್ಮಿ

(C) ಭೂಸನೂರ ಮಠ – ಭವ್ಯಮಾನವ

(D) ಪು. ತಿ. ನ. – ಗೋಲ್ಗೋಥಾ

**46.** ಬಹು ಆಯ್ಕೆ ಜೋಡಣೆ

(a) ಪ್ಲೇಟೋ 1) ಪೊಯಟಿಕ್ಸ್

(b) ಅರಿಸ್ಟಾಟಲ್ 2) ಈಡಿಪಸ್

(c) ಸೊಫೊಕ್ಲೀಸ್ 3) ಆರ್ಟ್ಸ್ ಪೊಯೆಟಿಕ್

(d) ಹೊರೆಸ್ 4) ಟ್ರಡಿಶನ್ ಅಂಡ್ ಇಂಡಿವಿಜುವೆಲ್ ಟಾಲೆಂಟ್

5) ರಿಪಬ್ಲಿಕ್

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | 1 | 5 | 4 | 3 |
| (B) | 5 | 1 | 2 | 4 |
| (C) | 5 | 1 | 2 | 3 |
| (D) | 1 | 4 | 5 | 3 |

**47.** ಬಹು ಆಯ್ಕೆಯ ಜೋಡಣೆ

(a) ಕೃಷ್ಣಕುಮಾರಿ 1) ನವ್ಯ

(b) ಗಾಂಧಿಸ್ಮರಣೆ 2) ನವೋದಯ

(c) ನಡೆದು ಬಂದ ದಾರಿ 3) ದಲಿತ

(d) ಕಪ್ಪು ಕಾವ್ಯ 4) ಬಂಡಾಯ

5) ಪ್ರಗತಿಶೀಲ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | 2 | 3 | 4 | 1 |
| (B) | 2 | 4 | 1 | 3 |
| (C) | 5 | 3 | 1 | 4 |
| (D) | 5 | 3 | 2 | 4 |

**48.** ಅನುಕ್ರಮ ಮಾದರಿ : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

(A) ಜಾತಕ ತಿಲಕ, ಚಂದ್ರಚೂಡಾಮಣಿ ಶತಕ, ಮಲ್ಲಿನಾಥ ಪುರಾಣ, ಕರ್ನಾಟಕ ಭಾಷಾಭೂಷಣ

(B) ಕರ್ನಾಟಕ ಭಾಷಾಭೂಷಣ, ಜಾತಕ ತಿಲಕ, ಮಲ್ಲಿನಾಥ ಪುರಾಣ, ಚಂದ್ರಚೂಡಾಮಣಿ ಶತಕ

(C) ಕರ್ನಾಟಕ ಭಾಷಾಭೂಷಣ, ಜಾತಕ ತಿಲಕ, ಚಂದ್ರಚೂಡಾಮಣಿ ಶತಕ, ಮಲ್ಲಿನಾಥ ಪುರಾಣ

(D) ಜಾತಕ ತಿಲಕ, ಕರ್ನಾಟಕ ಭಾಷಾಭೂಷಣ, ಮಲ್ಲಿನಾಥ ಪುರಾಣ, ಚಂದ್ರಚೂಡಾಮಣಿ ಶತಕ

**49.** (A) ಶಾಂತಿನಾಥ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ನಾಗಚಂದ್ರ, ಬ್ರಹ್ಮಶಿವ

(B) ಮಲ್ಲಿಕಾರ್ಜುನ ಪಂಡಿತಾರಾಧ್ಯ, ಶಾಂತಿನಾಥ, ನಾಗಚಂದ್ರ, ಬ್ರಹ್ಮಶಿವ

(C) ಮಲ್ಲಿಕಾರ್ಜುನ ಪಂಡಿತಾರಾಧ್ಯ, ನಾಗಚಂದ್ರ, ಬ್ರಹ್ಮಶಿವ, ಶಾಂತಿನಾಥ

(D) ಶಾಂತಿನಾಥ, ನಾಗಚಂದ್ರ, ಬ್ರಹ್ಮಶಿವ, ಮಲ್ಲಿಕಾರ್ಜುನ ಪಂಡಿತಾರಾಧ್ಯ,

**50.** (A) ಐಹೊಳೆ ಶಾಸನ, ಆತಕೂರು ಶಾಸನ, ದೇಕಬ್ಬೆ ಶಾಸನ, ಬುಕ್ಕನ ಶ್ರವಣಬೆಳಗೊಳ ಶಾಸನ

(B) ಆತಕೂರು ಶಾಸನ, ದೇಕಬ್ಬೆ ಶಾಸನ, ಐಹೊಳೆ ಶಾಸನ, ಬುಕ್ಕನ ಶ್ರವಣಬೆಳಗೊಳ ಶಾಸನ

(C) ಐಹೊಳೆ ಶಾಸನ, ಆತಕೂರು ಶಾಸನ, ಬುಕ್ಕನ ಶ್ರವಣಬೆಳಗೊಳ ಶಾಸನ, ದೇಕಬ್ಬೆ ಶಾಸನ,

(D) ಆತಕೂರು ಶಾಸನ, ಐಹೊಳೆ ಶಾಸನ, ದೇಕಬ್ಬೆ ಶಾಸನ, ಬುಕ್ಕನ ಶ್ರವಣಬೆಳಗೊಳ ಶಾಸನ



https://www.freshersnow.com/previous-year-question-papers/

https://www.freshersnow.com/



ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**



https://www.freshersnow.com/previous-year-question-papers/